ರೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯವನ್ನು ದಯೆಯಿಟ್ಟು ತಿಳಿಸುವರೆ :—

ಮೂಡಿಗೆರೆ ಟೌನ್ ಹತ್ತಿರ ಕೆ. ಎಂ. ರೋಡಿನಿಂದ ಮೂಡಿಗೆರೆ ಕಾನ್‌ವೆಂಟ್ ಸ್ಕೂಲ್ ಹಿಂಭಾಗದಿಂದ ಹೆಸಗರ್ ಹಳ್ಳದಿಂದ ಹಸಗರ್ ಹರಿಜನ ಕೇರಿ ಮಾರ್ಗವಾಗಿ ಕೊಡಗಿ ಬ್ಲೆರ್ ಮುಖೇನ ಚಿಕ್ಕಳ್ಳ, ಹಾರಲ ಗದ್ದೆ, ಕಾರಹಟ್ಟಿ ಮತ್ತು ನತ್ತಿಹಳ್ಳಿ ಮಾರ್ಗವಾಗಿ ಗುಲ್ಲನ ಪೇಟೆಗೆ ಒಂದು ರಸ್ತೆಯನ್ನು ಮಾಡಲು ಸರ್ಕಾರದವರು ಅಂದಾಜು ತಯಾರು ಮಾಡಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ (ರೋಕೋಪಯೋಗಿ ಮಂತ್ರಿಗಳು).—
ಇಲ್ಲ.

ಚಿಕ್ಕಮಗಳೂರು ತಾಲ್ಲೂಕು ವಳಗೇರಹಳ್ಳಿ ಹಲಸುಮನೆ ತಾಲ್ಲೂಕ್ ಅಭಿವೃದ್ಧಿ ರಸ್ತೆಯ ಕಾಮಗಾರಿ

61. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

ರೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯವನ್ನು ದಯೆಯಿಟ್ಟು ತಿಳಿಸುವರೆ: —

(ಅ) ಚಿಕ್ಕಮಗಳೂರು ತಾಲ್ಲೂಕಿನಲ್ಲಿಯ ವಳಗೇರಹಳ್ಳಿ—ಹಲಸುಮನೆ ತಾಲ್ಲೂಕ್ ಅಭಿವೃದ್ಧಿ ರಸ್ತೆಯನ್ನು ಕಾಮಗಾರಿ ಇರಾಖೆಗೆ ವಹಿಸಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿವೆಯೇ ;

(ಆ) ಹಾಗಿದ್ದರೆ, ಈ ವಿಷಯ ಈಗ ಯಾವ ಹಂತದಲ್ಲಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ (ರೋಕೋಪಯೋಗಿ ಮಂತ್ರಿಗಳು).—

(ಅ) ಇಲ್ಲ.

(ಆ) ಮೇಲ್ಕಂಡ ಉತ್ತರದಿಂದಾಗಿ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಮೂಡಿಗೆರೆ ತಾಲ್ಲೂಕಿನಲ್ಲಿ ಹಳೇಮೂಡಿಗೆರೆ ಹತ್ತಿರ ಒಂದು ಸೇತುವೆ ಮತ್ತು ಒಂದು ರಸ್ತೆ ನಿರ್ಮಿಸುವುದು

63. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

ರೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಮೂಡಿಗೆರೆ ತಾಲ್ಲೂಕು ಹಳೇಮೂಡಿಗೆರೆ ಹರಿಜನ ಕಾಲೋನಿ, ಹೊರಟ್ಟಿ ಹಳೇ ಮೂಡಿಗೆರೆ ಶ್ರೀ ಬೋಖಣ್ಣಗೌಡ್ರು ಮತ್ತು ಸಿದ್ದೇಗೌಡ್ರು ಗದ್ದೆ ಹತ್ತಿರದಲ್ಲಿರುವ ಹೊಳೆಗೆ ಅಡ್ಡಲಾಗಿ ಒಂದು ಸೇತುವೆ ಕಟ್ಟಸಿದರೆ ಮತ್ತು ಹಳೇ ಮೂಡಿಗೆರೆ ಗ್ರಾಮದ ಮೇಲೆ ಕೆ. ಎಂ. ರೋಡಿಗೆ ಸೇರಿಸುವಂತೆ ಒಂದು ರಸ್ತೆ ಮಾಡಿದರೆ ಸಾರ್ವಜನಿಕರಿಗೆ ಅನುಕೂಲವಾಗಿ ಅತ್ಯಲ್ಪ ಕಾಲದಲ್ಲಿ ರೈತರು ವ್ಯವಸಾಯ ಸಾಮಾನುಗಳನ್ನು ಸಾಗಿಸಲು ಅನುಕೂಲವಾಗುತ್ತದೆಂಬುದು ಸರಕಾರ ಪರಿಶೀಲಿಸಿದೆಯೆ ? ;

(ಆ) ಹಾಗಿದ್ದರೆ ಈ ಸೇತುವೆ ಮತ್ತು ರಸ್ತೆಯ ಬಗ್ಗೆ ನಕ್ಷೆ ಮತ್ತು ಅಂದಾಜುಗಳು ತಯಾರಿಸಲ್ಪಟ್ಟಿವೆಯೆ ?